ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ: ಕ್ಷೇಪ್ರ/ಕೃಯಾಂ/ಆರ್.ಸಿ/1/2009–10

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು–1,
ದಿನಾಂಕ: 11.02.2010
ಇ–ಮೇಲ್ : agrift@nic.in

ಸುತ್ತೋಲೆ

ವಿಷಯ : ಕೇಂದ್ರ ಸರ್ಕಾರದ ಅನುಮೋದಿತ ಟ್ರಾಕ್ಟರ್ ಮಾದರಿಗಳ ತಯಾರಕರನ್ನು ನೊಂದಣಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ :

1. ಇಲಾಖಾ ಟೆಂಡರು ಪ್ರಕಟಣೆ ಸಂಖ್ಯೆ: ಕ್ಷೇಪ್ರ/ಕೃಯಾಂ/ ಆರ್.ಸಿ/1/2009–10 ದಿ: 9.6.2009
2. ಇದೇ ಕಛೇರಿಯ ಸಮ ಸಂಖ್ಯೆಯ ದಿ: 16–10–2009 ರ ಸುತ್ತೋಲೆ.
3. ಇದೇ ಕಛೇರಿಯ ಸಮ ಸಂಖ್ಯೆಯ ದಿ: 30–1–2010ರ ಸುತ್ತೋಲೆ.
4. ಕೇಂದ್ರ ಸರ್ಕಾರದ ಪತ್ರ ಸಂ. 13–10/99–My(I&P) ದಿ: 10–09–09
5. ಇದೇ ಕಛೇರಿಯ ಸಮ ಸಂಖ್ಯೆಯ ದಿ: 18–01–10ರ ಕೇಂದ್ರ ಸರ್ಕಾರದ ಅನುಮೋದಿತ ಟ್ರಾಕ್ಟರ್ ಮಾದರಿಗಳ ತಯಾರಕರ ನೋಂದಣಿ ಪ್ರಕಟಣೆ.

– – –

ಉಲ್ಲೇಖ ಪತ್ರ (1) ರನ್ವಯ ಕೃಷಿ ಯಂತ್ರೋಪಕರಣಗಳನ್ನು ಕೃಷಿ ಇಲಾಖೆಯ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಸಹಾಯಧನದಡಿ ವಿತರಿಸಲು ಜರುಗಿದ ಟೆಂಡರು ಪ್ರಕ್ರಿಯೆ ಅರ್ಹಗೊಂಡ ಟ್ರ್ಯಾಕ್ಟರ್ ತಯಾರಕ ಸಂಸ್ಥೆಗಳ

ಕೇಂದ್ರ ಸರ್ಕಾರದ ಅನುಮೋದಿತ ಟ್ರ್ಯಾಕ್ಟರ್ ಮಾದರಿಗಳ ಪಟ್ಟಿ, ಗರಿಷ್ಠ ದರ ಹಾಗೂ ದೊರೆಯುವ ಸಹಾಯಧನದ ಮೊತ್ತದ ವಿವರಗಳನ್ನು ಉಲ್ಲೇಖಿತ ಸುತ್ತೋಲೆ (2) ಮತ್ತು (3) ರನ್ವಯ ನೀಡಲಾಗಿತ್ತು. ಆದರೆ ಉಲ್ಲೇಖಿತ ಪತ್ರ (4) ರನ್ವಯ ಕೇಂದ್ರ ಸರ್ಕಾರವು ಸಹಾಯಧನ ಪಡೆಯಲು ಅರ್ಹವಿರುವ ಟ್ರಾಕ್ಟರ್ ಮಾದರಿಗಳ ಪಟ್ಟಿಯನ್ನು ಪರಿಷ್ಕರಿಸಿರುತ್ತಾರೆ. ಅದರಂತೆ ಉಲ್ಲೇಖಿತ (5) ರಂತೆ ಕೇಂದ್ರ ಸರ್ಕಾರದ ಅನುಮೋದಿತ ಪಟ್ಟಿಯಲ್ಲಿರುವ 114 ಟ್ರಾಕ್ಟರ್ ಮಾದರಿಗಳಲ್ಲಿ ಈಗಾಗಲೇ ಇಲಾಖೆಯಲ್ಲಿ ಅನುಮೋದನೆಗೊಳ್ಳದ ಟ್ರಾಕ್ಟರ್ ಮಾದರಿಗಳ ತಯಾರಕರನ್ನು ನೋಂದಣಿಗಾಗಿ ನೋಂದಣಿ ಪ್ರಕಟಣೆ ಹೊರಡಿಸಲಾಗಿತ್ತು. ಸದರಿ ನೋಂದಣಿ ಪ್ರಕ್ರಿಯೆಯಲ್ಲಿ ಅರ್ಹಗೊಂಡ ಟ್ರಾಕ್ಟರ್ ತಯಾರಕರು. ಹಾಗು ಅವರ ಮಾದರಿಗಳನ್ನು ಖರೀದಿಸಿದ ರೈತರಿಗೂ ಸಹ ಸಹಾಯಧನ ಒದಗಿಸಲು ಆದೇಶಿಸಲಾಗಿದೆ. ಟ್ರಾಕ್ಟರ್‌ಗೆ ಸಹಾಯಧನ ಒದಗಿಸುವಾಗ ಉಲ್ಲೇಖಿತ (2) ಸುತ್ತೋಲೆಯಲ್ಲಿ ನೀಡಿದ ಅಂಶಗಳೊಂದಿಗೆ ಈ ಕೆಳಕಂಡ ಅಂಶಗಳನ್ನು ಪಾಲಿಸಲು ಸೂಚಿಸಲಾಗಿದೆ.

- ಟ್ರಾಕ್ಟರ್ ಸಹಾಯಧನವನ್ನು ನೇರವಾಗಿ ಟ್ರಾಕ್ಟರ್ ಖರೀದಿಸಲು ಸಾಲ ಒದಗಿಸಿದ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡುವುದು.
- ಯಾವುದೇ ಕಾರಣಕ್ಕೆ ಟ್ರಾಕ್ಟರ್ ವಿತರಕರ (ಡೀಲರ್) ಸಂಸ್ಥೆಗೆ ಅಥವಾ ಸಾಲ ಒದಗಿಸಿದ ಬ್ಯಾಂಕ್ ಖಾತೆಯ ಬದಲಾಗಿ ಬೇರೆ ಬ್ಯಾಂಕ್ ಖಾತೆಗೆ ಸಹಾಯ ಧನವನ್ನು ನೀಡಬಾರದು.
- ಟ್ರಾಕ್ಟರ್ ಮಾದರಿಗಳ ದರಗಳು ಗರಿಷ್ಠ ದರಗಳಾಗಿದ್ದು ರೈತರು ಅನುಕೂಲಕರ ದರಕ್ಕೆ ಚೌಕಾಸಿ ಮಾಡಿ ಖರೀದಿಸಲು ಅವಕಾಶವಿರುತ್ತದೆ.
- ಇಲಾಖೆಗೆ ನೀಡಿದ ಟ್ರಾಕ್ಟರ್ ಮಾದರಿಗಳ ದರಗಳು ಮುಕ್ತ ಮಾರುಕಟ್ಟೆಯ ದರಕ್ಕಿಂತ ಹೆಚ್ಚಿದ್ದಲ್ಲಿ ಸಂಬಂಧಿಸಿದ ಸಂಸ್ಥೆಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
- ಅನುಮೋದಿತ ಪಟ್ಟಿಯಲ್ಲಿ ಇರುವಂತೆ ಮಾದರಿಗಳಿಗೆ ಮಾತ್ರ ಸಹಾಯಧನವನ್ನು ಒದಗಿಸುವುದು. ಸಹಾಯಧನ ಒದಗಿಸುವ ಮುನ್ನ ಸರಬರಾಜು ಮಾದರಿಗಳನ್ನು ಕೂಲಂಕಷವಾಗಿ ಪರಿಶೀಲಿಸುವುದು.

ಅನುಮೋದಿಸಿದ ಟ್ರಾಕ್ಟರ್ ತಯಾರಕ ಸಂಸ್ಥೆ ಹಾಗೂ ಅನುಮೋದಿತ ಮಾದರಿಗಳ ಗರಿಷ್ಟ ದರದ ವಿವರಗಳು (ರೂಗಳಲ್ಲಿ)

ಕ್ರ ಸಂ.	ಸಂಸ್ಥೆ	ಮಾದರಿ	ದರಗಳು
1	ಮೆಃ ಎಸ್ಕಾರ್ಟ್ಸ್ ಲಿ., ಅಗ್ರಿಮೆಷಿನರಿ ಮಾರ್ಕೆಟಿಂಗ್ ಡಿವಿಜನ್, ನಂ.43, ಬಸವೇಶ್ವರ ಹೆಚ್.ಬಿ.ಸಿ.ಎಸ್. 2ನೇ ಹಂತ, ಚಂದ್ರಲೇಔಟ್, ವಿಜಯನಗರ, ಬೆಂಗಳೂರು–40	ಪವರ್ ಟ್ರ್ಯಾಕ್ 439 ಡಿಎಕ್ಸ್	496998
2	ಮೆಃ ಮಹೀಂದ್ರ ಅಂಡ್ ಮಹೀಂದ್ರ ಲಿ. (FES) ಸ್ವರಾಜ್ ಡಿವಿಷನ್, 4ನೇ ಫೇಸ್, ಎಸ್.ಎ.ಎಸ್. ನಗರ, ಮೊಹಾಲಿ ಜಿಲ್ಲೆ ರೊಪಾರ್, ಪಂಜಾಬ್– 160055	ಸ್ವರಾಜ್ 722 ಸೂಪರ್	340807
		ಸ್ವರಾಜ್ 724 ಎಫ್ಇ	382914
		ಸ್ವರಾಜ್ 733 ಎಫ್ಇ (8+2) ಸ್ಪೀಡ್ ಗೇರ್ ಬಾಕ್ಸ್	416241
		ಸ್ವರಾಜ್ 735	481896

		ಎಫ್ಇ (8+2)	
		ಸ್ವರಾಜ್ 834 ಎಫ್ಇ	430299
		ಸ್ವರಾಜ್ 724 ಎಫ್ಇ ಆರ್ಚರ್ಡ್	379363
		ಸ್ವರಾಜ್ 735 ಎಕ್ಸ್ಎಂ	487912
		ಸ್ವರಾಜ್ 843 ಎಕ್ಸ್.ಎಂ.	500179
		ಸ್ವರಾಜ್ 834 ಎಕ್ಸ್.ಎಂ.	439744
		ಸ್ವರಾಜ್ 724 ಎಕ್ಸ್.ಎಂ.	382914
3	ಮೆಃ ನ್ಯೂ ಹಾಲಂಡ್ ಟ್ರ್ಯಾಕ್ಟರ್ಸ್ (ಇಂಡಿಯಾ) ಪ್ರೈ.ಲಿ., ನಂ.50, ಓಕ್ಲಾ ಇಂಡಸ್ಟ್ರಿಯಲ್ ಎಸ್ಟೇಟ್– ಐಐಐ, ನವದೆಹಲಿ–20.	ನ್ಯೂ ಹಾಲಂಡ್ 4010	482904
4	ಮೆಃ ಟ್ರಾಕ್ಟರ್ಸ್ ಅಂಡ್ ಫಾರ್ಮ್ ಇಕ್ವಿಪ್‌ಮೆಂಟ್ ಲಿ. ನಂ.35, ನ್ಯುಂಗಂಬಕ್ಕಮ್ ಹೈರೋಡ್, ಚೆನ್ನೈ–600034.	ಟಾಫೆ ಎಂಎಫ್ 241 ಡಿಐಜೆ ಮಹಾಶಕ್ತಿ	466506
		ಟಾಫೆ ಎಂಎಫ್ 241 ಡಿಐ ಪ್ಲಾನಿಟರಿ ಡ್ರೈವ್	494076
		ಟಾಫೆ ಎಂಎಫ್	490138

		4410	
5	ಮೆಃ ಕುಬೋಟ ಅಗ್ರಿಕಲ್ಚರಲ್ ಮೆಶಿನರಿ ಇಂಡಿಯಾ ಪ್ರೈ ಲಿ., ರೀಗಸ್ ಲೆವೆಲ್–12, ಅಲ್ಬಿಯಸ್ ಓಲಂಪಿಯಾ ಟೆಕ್‌ಪಾರ್ಕ್, ನಂ.1, ಎಸ್‌ಐಡಿಸಿಓ ಇಂಡಸ್ಟ್ರೀಯಲ್ ಎಸ್ಟೇಟ್, ಗಿಂಡಿ, ಚೆನ್ನೈ–32	ಕುಬೋಟ ಜಪಾನ್ ಬಿ–2420	443000
		ಕುಬೋಟ ಜಪಾನ್ ಎಲ್–3408 ಡಿಡಿ	630000
6	ಮೆಃ ಪ್ರೀತ್ ಟ್ರಾಕ್ಟರ್ಸ್ ಪ್ರೈ.ಲಿ., ಪೋಸ್ಟ್ ಬಾಕ್ಸ್–28, ಪಾಟೀಯಾಲ ರೋಡ್, ನಾಭಾ–147201 (ಪಂಜಾಬ್)	ಪ್ರೀತ್ 3549– ಐ	465000
		ಪ್ರೀತ್ 4049– ಐ	478000
		ಪ್ರೀತ್ 5049– ಐ	488540
7	ಮೆ. ಸಾಮೆ ಡಚ್ ಫಾಹರ್ ಇಂಡಿಯಾ ಪ್ರೈ.ಲಿ. ನಂ.45/3 ಬೆಲ್ ಮಾರ್ ಎಸ್ಟೇಟ್, ನಾಗಸಂದ್ರಹಳ್ಳಿ, 8ನೇ ಮೈಲಿಕಲ್ಲು, ತುಮಕೂರು ರೋಡ್, ಬೆಂಗಳೂರು–73	ಸಾಮೆ 36 ಡಿಐ ಯೂರೋ ಡಬ್ಲ್ಯೂ	396245
		ಸಾಮೆ 393	426864
		ಸಾಮೆ 403	455608
8	ಮೆ. ಫೋರ್ಸ್ ಮೋಟಾರ್ಸ್ ಲಿ. ಮುಂಬೈ ಪುಣೆ ರೋಡ್ ಅಕುರ್ಡಿ ಪುಣೆ–411035.	ಟೆಂಪೋ ಒಎಕ್ಸ್ 25 (ಆರ್ಚ್‌ಡ್ ಸ್ಪೆಷಲ್)	356338
		ಬಲವಾನ್ 330	415386
		ಟೆಂಪೋ	458211

		ಬಲವಾನ್ 400	
		ಒಟ್ಟು ಸಹಾಯ ಧನ	**60000**
		ಕೇಂದ್ರದ ಪಾಲು	**45000**
		ರಾಜ್ಯದ ಪಾಲು	**15000**

(ಕರಡು ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಪ್ರತಿಯನ್ನು :-

೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು. ಇವರ ಅವಗಾಹನೆಗಾಗಿ ಅದರಪೂರ್ವಕವಾಗಿ ಸಲ್ಲಿಸಿದೆ.

೨. ಅಪರ ಕೃಷಿ ನಿರ್ದೇಶಕರು (ಮಾನವ ಸಂಪನ್ಮೂಲ ಅಭಿವೃದ್ಧಿ/ ಬೆಳೆ ಅಭಿವೃದ್ಧಿ & ಯೋಜನೆ/ ಸಾವಯವ ಕೃಷಿ), ಮುಖ್ಯ ಲೆಕ್ಕಾಧಿಕಾರಿ ಗಳು ಮತ್ತು ಕಾನೂನು ಅಧಿಕಾರಿಗಳು, ಕೇಂದ್ರ ಕಛೇರಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ಅನುಸರಣಾ ಮತ್ತು ಅನುಪಾಲನಾ ಕ್ರಮಕ್ಕಾಗಿ ರವಾನಿಸಿದೆ.

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳ ಪಂಚಾಯತಿಗಳು
2. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು, ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ಹಾಗೂ ಎಲ್ಲ ರೈತ ಸಂಪರ್ಕ ಕೇಂದ್ರಗಳ ಕೃಷಿ ಅಧಿಕಾರಿಗಳು (ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳ ಮುಖಾಂತರ)
3. ಸಂಬಂಧಪಟ್ಟ ಸಂಸ್ಥೆಗಳು.

(ಕರಡು ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ಆಯುಕ್ತರ ಪರವಾಗಿ.